ಕಾಪು ಕ್ಷೇತ್ರದ ಸಣ್ಣ ನೀರಾವರಿ ಯೋಜನೆ ಅಭಿವೃದ್ಧಿ.

283 (25) **ಶ್ರೀ ವಸಂತ ಎ. ಸಾಲಿಯಾನ (ಕಾಪು) :** ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿರುವ (1) ಫಲಿಮಾರು ಮತ್ತು (2) ಚರ್ಕಾಲು ನೀರಾವರಿ ಅಣೆಕಟ್ಟುಗಳ ರಿಪೇರಿಗಾಗಿ ಸರ್ಕಾರವನ್ನು ಒತ್ತಾಯಿಸುತ್ತಿದ್ದರೂ ಅವಶ್ಯಕ ಕ್ರಮ ಕೈಗೊಳ್ಳದಿರಲು ಕಾರಣವೇನು; ಇವುಗಳನ್ನು ಯಾವಾಗ ದುರಸ್ತಿ ಮಾಡಲಾಗುವುದು;

ಶ್ರೀ ತಿಪ್ಪೆಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಈ ಅಣೆಕಟ್ಟುಗಳ ದುರಸ್ತಿಗಾಗಿ ಸುಮಾರು 15 ಲಕ್ಷ ರೂ ಬೇಕಾಗಿರುತ್ತದೆ. 1996-97ನೇ ಸಾಲಿನಲ್ಲಿ ಯೋಜನೇತರ ಲೆಕ್ಕ ಶೀರ್ಷಿಕೆಯಡಿ ಅನುದಾನದ ಕೊರತೆ ಇರುವುದರಿಂದ ಈ ಕಾಮಗಾರಿಗಳನ್ನು ಕೈಗೊಂಡಿಲ್ಲ.

ಈ ದುರಸ್ತಿ ಕಾಮಗಾರಿಗಳನ್ನು 1997-98ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಎಂ.ಆರ್.ಪಿ. ಎಲ್. ಗಲಭೆ

284 (23) **ಶ್ರೀ ಶ್ರೀ ವಸಂತ ಎ.ಸಾಲಿಯಾನ (ಕಾಪು) :** ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1995ರಲ್ಲಿ ಎಂ.ಆರ್ . ಪಿ.ಎಲ್ ಪೈಪ್‌ಲೈನ್ ಹಾಕುವಾಗ ದಕ್ಷಿಣ ಕನ್ನಡ ಜಿಲ್ಲೆಯಾದ ಚಳವಳಿಯಲ್ಲಿ ಕಾಪು ವಿಧಾನಸಭಾ ಕ್ಷೇತ್ರದಲ್ಲಾದ ಗಲಭೆ ದೊಂಬಿಯಲ್ಲಾದ ಸರಕಾರಿ ಮತ್ತು ಖಾಸಗಿ ಸ್ವತ್ತುಗಳ ನಷ್ಟವೆಷ್ಟು? (ಪ್ರತ್ಯೇಕವಾಗಿ ವಿವರ ನೀಡುವುದು);

ಆ) ಗಲಭೆಯಲ್ಲಿ ಸಂತ್ರಸ್ತರಾದವರಿಗೆ ಮಂಜೂರಾದ ಪರಿಹಾರಧನವೆಷ್ಟು? ಇನ್ನೂ ಎಷ್ಟು ಸಂತ್ರಸ್ತರಿಗೆ ಎಷ್ಟು ಮೊತ್ತ ಪಾವತಿಗೆ ಬಾಕಿ ಇದೆ?

ಇ) ಗಲಭೆಯಲ್ಲಿ ಸುಟ್ಟು ಹೋದ ವಾಹನಗಳ ಮಾಲೀಕರಿಗೆ ಇದುವರೆಗೆ ಪರಿಹಾರ ಮಂಜೂರಾಗದೇ ಇರಲು ಕಾರಣವೇನು ಮತ್ತು ಯಾವಾಗ ಪರಿಹಾರ ನೀಡಲಾಗುವುದು;

ಶ್ರೀ ಆರ್. ರೋಶನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಸರ್ಕಾರಿ ಸ್ವತ್ತುಗಳಿಗೆ ನಷ್ಟವಾಗಿರುವುದಿಲ್ಲ.

ಖಾಸಗಿ ಸ್ವತ್ತುಗಳ ನಷ್ಟ ರೂ. 26,40,255:00.

ಆ) ಸಂತ್ರಸ್ತರಿಗೆ ಮಂಜೂರಾದ ಪರಿಹಾರಧನ ರೂ. 5,30 907-00

ಸಂತ್ರಸ್ತರಿಗೆ ಪಾವತಿಗೆ ಬಾಕಿ ಇರುವುದಿಲ್ಲ.